ಮುದ್ದೇಬಿಹಾಳ ಗ್ರಾಮದಲ್ಲಿ ನಿರ್ಮಿಸಲಾದ ಕೆರೆಯಿಂದ ನೀರಾವರಿ ಸೌಲಭ್ಯ

೧೨೧೮ ಶ್ರೀ ದೇಸಾಯಿ ಶಿವಪುತ್ರಪ್ಪ ಮಡಿವಾಳಪ್ಪ (ಹೂವಿನ ಹಿಪ್ಪರಗಿ).— ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಪದಕನೂರು ಗ್ರಾಮದಲ್ಲಿ ನಿರ್ಮಾಣವಾದ ಕೆರೆಯಿಂದ ನೀರಾವರಿಯಾದ ಜಮೀನಿನ ವಿಸ್ತೀರ್ಣವೆಷ್ಟು ?

(ಆ) ಈಗ ನೀರಾವರಿ ಆಗುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು ?

(ಇ) ಈಗ ಅಲ್ಲಿ ನೀರಾವರಿ ಕ್ಷೇತ್ರ ಕಡಿಮೆ ಆಗಲು ಕಾರಣವೇನು ?

(ಈ) ಕೆರೆಯ ಕೆಳಗೆ ಪೂರ್ತಿ ಜಮೀನು ನೀರಾವರಿ ಆಗುವಂತೆ ಮಾಡಲು ಕೈಕೊಳ್ಳುವ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು),—

(ಅ) ೯೪೪ ಹೆಕ್ಟೇರುಗಳು

(ಆ) ೪೮೦ ಹೆಕ್ಟೇರುಗಳು

(ಇ) ಕಾಲುವೆಗೆ ಬೇಕಾದ ಭೂಮಿಯನ್ನು ರೈತರು ಬಿಟ್ಟುಕೊಡದೆ ಹೋದುದರಿಂದ ಕಾಲುವೆ ಆಗೆಯುವ ಕೆಲಸವು ಪೂರ್ತಿಯಾಗದೆ ಪೂರ್ತಿ ಅಚ್ಚುಕಟ್ಟಿಗೆ ನೀರು ಪೂರೈಸಲಾಗಿಲ್ಲ.

(ಈ) ಭೂಸ್ವಾಧೀನ ಕಾಯಿದೆ ಪ್ರಕಾರ ಭೂಸ್ವಾಧೀನಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಸ್ವಾಧೀನಾನಂತರ, ಕಾಲುವೆಯ ಕೆಲಸವನ್ನು ಪೂರೈಸಲಾಗುವುದು.

ಕಣ್ವಾ ಜಲಾಶಯದ ಅಭಿವೃದ್ಧಿ

೧೧೧೬. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕಣ್ವ ಜಲಾಶಯದ ಅಭಿವೃದ್ಧಿಗೆ ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೆ.

(ಆ) ಮಂಚನಬೆಲೆ ಜಲಾಶಯದಿಂದ ತೂಬುಕಾಲುವೆಯ ಮೂಲಕ ಕಣ್ವಾ ಜಲಾಶಯಕ್ಕೆ ನೀರನ್ನು ಒದಗಿಸುವ ಯೋಜನೆ ಇದೆಯೆ ?

(ಇ) ಹಾಗಿದ್ದಲ್ಲಿ ಆ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

(ಅ) ಇಲ್ಲ.

(ಆ) ಇಲ್ಲ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯ ಬೆಂಗಳೂರು ವಿಭಾಗ

೫೫೫ ಶ್ರೀ ಜಿ. ಎಸ್. ಶಿವನಂಜಪ್ಪ (ಗಂಬ್ಳಿ).— ಲೋಕೋಪಯೋಗಿ ಜಲಾಶಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಲೋಕೋಪಯೋಗಿ ಇಲಾಖೆಯ ಬೆಂಗಳೂರು ವಿಭಾಗದಲ್ಲಿರುವ ಉಪ ವಿಭಾಗಗಳ ಸಂಖ್ಯೆ ಎಷ್ಟು ಮತ್ತು ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗಳ ಸಂಖ್ಯೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗಳ ಸಂಖ್ಯೆ ಎಷ್ಟು ?

(ಅ) ಬೆಂಗಳೂರು ವಿಭಾಗದಲ್ಲಿರುವ ವಿಭಾಗ ಮತ್ತು ಉಪ ವಿಭಾಗಗಳಲ್ಲಿ ಕಾರ್ಯನಿರ್ವಾಹಕ ಅಭಿಯಂತರರ ಮತ್ತು ಸಹಾಯಕ ಅಭಿಯಂತರರುಗಳ ಸಂಖ್ಯೆ ಎಷ್ಟು (ಜಾತಿವಾರು ವಿವರ ಕೊಡುವುದು).

ಶ್ರೀ ಹೆಚ್. ಡಿ, ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ)	ಉಪ ವಿಭಾಗಗಳ ಸಂಖ್ಯೆ	...	೮+(೧ PA)
	ಕಾರ್ಯನಿರ್ವಾಹಕ ಅಭಿಯಂತರರ ಸಂಖ್ಯೆ	...	೧
	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಸಂಖ್ಯೆ	...	೯
(ಆ)	ಬೆಂಗಳೂರು ವಿಭಾಗದಲ್ಲಿರುವ ಕಾರ್ಯನಿರ್ವಾಹಕ ಅಭಿಯಂತರರ ಸಂಖ್ಯೆ	...	೧
	ಬೆಂಗಳೂರು ಉಪ ವಿಭಾಗದಲ್ಲಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳ ಸಂಖ್ಯೆ	...	೮

ಎ. ಕಾರ್ಯನಿರ್ವಾಹಕ ಅಭಿಯಂತರರ ಜಾತಿ ವಿವರ.—

ಗಾಣಿಗ ... ೧

ಬಿ. ಸಹಾಯಕ ಕಾರ್ಯಪಾಲಕ ಅಭಿಯಂತರರ ಜಾತಿ ವಿವರಗಳು.—

ಗಾಣಿಗ	...	೧	ಪರಿಶಿಷ್ಟ ಜಾತಿ	...	೧
ಮುಸ್ಲಿಂ	...	೧	ಪರಿಶಿಷ್ಟ ವರ್ಗ	...	೧
ದೇವಾಂಗ	...	೧	ಕುರುಬ	...	೧
ಒಕ್ಕಲಿಗ	...	೩			

(including 1 PA to EE)

ಕಾವೇರಿ ಹಾಗೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿರುವ ಅಭಾವ ಪೀಡಿತ ಪ್ರದೇಶಗಳು

೧೧೮೯. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಲೋಕೋಪಯೋಗಿ ಜಲಾನಯನದ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಕಾವೇರಿ ಹಾಗೂ ಕೃಷ್ಣ ಜಲಾನಯನ ಪ್ರದೇಶದಲ್ಲಿನ ಅಭಾವ ಪೀಡಿತ ಪ್ರದೇಶದ ಒಟ್ಟು ವಿಸ್ತೀರ್ಣವೆಷ್ಟು ಮತ್ತು ಬಿತ್ತನೆ ಪ್ರದೇಶಕ್ಕೆ ಹೋಲಿಸಿದಲ್ಲಿ ಇದರ ಶೇಕಡಾವಾರು ಪ್ರಮಾಣವೆಷ್ಟು ? ಕಾವೇರಿ ಹಾಗೂ ಕೃಷ್ಣ ಜಲಾನಯನ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವಿವರಗಳನ್ನೊದಗಿಸುವುದು.

(ಆ) ಅಭಾವ ಪೀಡಿತ ಪ್ರದೇಶವನ್ನು ನೀರಾವರಿಗೊಳಿಸುವ ಸಲುವಾಗಿ ಯೋಜನೆಗಳನ್ನೇನಾದರೂ ರೂಪಿಸಲಾಗಿದೆಯೇ ? (ಹಾಗಿದ್ದಲ್ಲಿ ವಿವರಗಳನ್ನೊದಗಿಸುವುದು)

(ಇ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲು ಎಷ್ಟು ಸಮಯ ಬೇಕಾಗುವುದು ?